"ಗಾಬರಿಯಾಗಿಬಿಟ್ಟಿರಾ?" ಎಂದ. ಕೇಳುವುದೇನಿದೆ? ಹೇಳುವುದೇನಿದೆ? ನಾವು ಯಾರೂ ಮಾತಾಡಲಿಲ್ಲ. ದೊಡ್ಡವರ ಕೈಗೆ ಸಿಕ್ಕು ಬಿದ್ದಿದ್ದೆವು.

ವೆಂಕಟ ಮತ್ತು ಅವನ ಅಪ್ಪ ತದಡಿಗೆ ಯಾಕೆ ನಮ್ಮ ದೋಣಿಯನ್ನು ಮುನ್ನಡೆಸಿದರೋ, ತಿಳಿಯದು. ನದಿ ಮಧ್ಯದ ನಮ್ಮ ಸಂಕಟದ ಸನ್ನಿವೇಶದಿಂದ ವಾಪಸು ಅಘನಾಶಿನಿ ಕಡೆಗೇ ಕರೆದುಕೊಂಡು ಹೋಗಲೂಬಹುದಿತ್ತು. ಅಥವಾ ಗಾಳಿ ಈ ದಿಕ್ಕಿಗೆ ಬಲವಾಗಿ ಬೀಸುತ್ತಿದ್ದುದು ಕಾರಣವಿರಬೇಕು. ನಮ್ಮ ಹುಚ್ಚಾಟಕ್ಕೆ ಒಂದು ಅರ್ಥವಿರಲಿ ಎಂದೇ ಅವರು ನಮ್ಮನ್ನು ತದಡಿಗೆ ಕರೆತಂದರೆಂದು ತಿಳಿಯುತ್ತೇನೆ. ಇಲ್ಲವಾದರೆ ನಮ್ಮ ಸಾಹಸವನ್ನು ಯಾರೂ ಸುವರ್ಣಾಕ್ಷರಗಳಿಂದ ಬರೆಯಲಾಗುತ್ತಿರಲಿಲ್ಲ. ಇರಲಿ, ಅವೆಲ್ಲ ಬೇಡದ ಮಾತು. ಮಧ್ಯಾಹ್ನ ಉಂಡು ಮಲಗಿದ್ದ ಮಾದೇವಣ್ಣನನ್ನು ಎಬ್ಬಿಸಿದ್ದು ವೆಂಕಟನೇ ಅಂತೆ. ಅವನು ನದಿ ತೀರದಲ್ಲಿದ್ದ. ನದಿನೀರಲ್ಲಿ ಕಲ್ಲೆಸೆದು ಆಟವಾಡುತ್ತಿದ್ದ. ಅದು ಕಪ್ಪೆ ಹಾರಿದಂತೆ ಕಲ್ಲು ನೀರಲ್ಲಿ ಕುಪ್ಪಳಿಸಿ ಹಾರುವ ಆಟ. ಹಾಗೆ ಅಲ್ಲೇ ಓಡಾಡುತ್ತಿದ್ದವನಿಗೆ ದೋಣಿಯೊಂದು ದೂರದಲ್ಲಿ ಚಲಿಸುತ್ತಿದ್ದುದು ಕಂಡಿದೆ. ಭರತಕ್ಕೆ ಸಿಕ್ಕು ಗಾಬರಿ ಬಿದ್ದು ಕೂಗಾಡುತ್ತಿದ್ದುದು ಗಾಳಿಯಲೆಯಲ್ಲಿ ಹೇಗೋ ಕೇಳಿಸಿದೆ. ಪಾತಿದೋಣಿಯ ಪ್ರೇತನೃತ್ಯವೂ ಕಾಣಿಸಿದೆ. ಅಪ್ಪನನ್ನು ಎಬ್ಬಿಸಿ ಹೊರಡಿಸಿದ್ದಾನೆ. ಅಪ್ಪ ಮಾತ್ರವಲ್ಲ, ವೆಂಕಟನೂ ನಮ್ಮನ್ನು ಹೀನಾಮಾನ ಬೈದವನೇ. ಎಲ್ಲ ಬೈಗುಳಗಳನ್ನೂ ಕೃತಜ್ಞತೆಯಿಂದ ಸ್ವೀಕರಿಸಿದೆವು. ಇದೀಗ ತದಡಿಯಲ್ಲಿ ನಮ್ಮ ಕಥೆಗೆ ಬೇರೆಯದೇ ತಿರುವು ಸಿಗಲಿದೆ ಎಂದು ದೋಣಿಯಿಂದ ಇಳಿಯುವಾಗಂತೂ ತಿಳಿದಿರಲಿಲ್ಲ.

"ಸರಿ, ಹೇಗಿದ್ದರೂ ಇಲ್ಲಿಯವರೆಗೆ ಬಂದಿದ್ದೀರಿ. ಒಂದು ಹತ್ತು ನಿಮಿಷದ ಕೆಲಸ ಮುಗಿಸಿ ಬರುತ್ತೇನೆ. ಮತ್ತೆ ಕಿತಾಪತಿ ಮಾಡಬೇಡಿ ಭಟ್ಟರೇ" ಎಂದು ಕೇಶಪ್ಪಚ್ಚಿಯ ಕಡೆ ನೋಡಿ ಹೇಳಿ ವೆಂಕಟನ ಅಪ್ಪ ಬೀಡಿ ಸೇದಿ ಬರಲು ಹೊರಟ.

ಇಲ್ಲಿಯವರೆಗೂ ಎಲ್ಲವೂ ಚೆನ್ನಾಗಿತ್ತು ಎಂದೇ ಹೇಳಬಹುದು. ಆದರೆ, ವಿಧಿಯ ಸಂಚು ಬೇರೆಯೇ ಇತ್ತು. ಕತಗಾಲಿಗೆ ಹೋದ ಅಜ್ಜ ಅದಾವ ಮಾಯೆಯಿಂದ ಗೋಕರ್ಣದ ಕಡೆ ಬಂದು ತದಡಿ ತೀರಕ್ಕೆ ಬಂದು ಮುಟ್ಟಿದರೋ! ಆ ಉರಿ ಬಿಸಿಲಿನ ಮಧ್ಯಾಹ್ನದ ಹೊತ್ತು ನಮ್ಮ ತಂಡ ತದಡಿಗೆ ಹೇಗೆ ಬಂದಿತೆಂದು ಅವರ ತಲೆ ಹಾಳಾಗಿಹೋಯಿತು. ಹಾಳು ವೆಂಕಟ ಇಡೀ ಕಥೆಯನ್ನು ಅವರಿಗೆ ಚಾಚೂ ತಪ್ಪದೆ ವಿವರಿಸಿದ. ಕೇಳುತ್ತ ಅಜ್ಜನ ಮುಖ ಕೆಂಪಾಗತೊಡಗಿತ್ತು. ಈಗ ಇನ್ನೊಂದೇ ಭರತ ಶುರುವಾಯಿತಲ್ಲಪ್ಪಾ ಅಂದುಕೊಂಡೆವು. ಅಜ್ಜನಿಗೆ ಆ ಥರ ಸಿಟ್ಟು ಬಂದುದನ್ನು ನಾವೆಂದೂ ಕಂಡಿರಲಿಲ್ಲ.

"ಕೇಶಾ, ಬಾ ಇಲ್ಲಿ" ಅಜ್ಜ ಕೂಗಿದರು.

ಕೇಶಪ್ಪಚ್ಚಿ ತಲೆ ತಗ್ಗಿಸಿಕೊಂಡು ಬಂದು ನಿಂತ.

"ನನ್ನ ಮೊಮ್ಮಕ್ಕಳನ್ನು ಸಾಯಿಸಲೆಂದು ಬಂದೆಯೇನು ನೀನು?" ಅಜ್ಜ ಸಿಟ್ಟಿನಿಂದ ಕಂಪಿಸುತ್ತಿದ್ದರು.

"ಹುಡುಗಾಟಕ್ಕೂ ಒಂದು ಮಿತಿ ಉಂಟು. ಇವತ್ತು ನೀವೆಲ್ಲ ನದಿ ಪಾಲಾಗುತ್ತಿದ್ದಿರಿ, ಹೌದಲ್ಲವೇ?"

"....."

"ಯಾಕೆ ಮಾತಾಡುವುದಿಲ್ಲ? ಕೇಳಿದವರಿಗೆ ಏನು ಉತ್ತರ ಹೇಳಬೇಕಿತ್ತು ನಾನು? ಇವರೆಲ್ಲ ಬಲಿಯಾಗಿ ಹೋದ ಮೇಲೆ ನಾನು ಹೇಗೆ ಬದುಕಬೇಕಿತ್ತು? ಯಾಕೆ ಬದುಕಬೇಕಿತ್ತು?" ಅಜ್ಜನ ಧ್ವನಿ ಅಳುವಿನಲ್ಲಿ ಅದ್ದಿ ಒಮ್ಮೊಮ್ಮೆ ಚೀರಿದಂತೆಯೂ, ತಾಮ್ರದ ಪಾತ್ರೆ ಗೀರಿದಂತೆಯೂ ಕೇಳುತ್ತಿತ್ತು.

ಕೇಶಪ್ಪಚ್ಚಿಯೂ ಅಳತೊಡಗಿದ. ಇತ್ತ ನಾವೂ ಏನೂ ಅರ್ಥವಾಗದೆ, ಏನು ಮಾಡಬೇಕೆಂದೂ